ಸಮಯವಿತ್ತು.'

'ಹಾಗಾಗಿ ಸುಮ್ಮನೇ ಆಕಾಶನೋಡುತ್ತಾ ಎಚ್ಚರಿದ್ದು ಕಾಯುತ್ತಿದ್ದೆವು'

'ಅಷ್ಟು ಹೊತ್ತಿಗೆ ಕರಡಿಯೊಂದು ನಮ್ಮ ಕಡೆ ಬರುವುದು ಕತ್ತಲಿನಲ್ಲಿ ಕಂಡಿತು'

'ಅದು ಆ ಕರಡಿ ವಾಸಿಸುತ್ತಿದ್ದ ಬಂಡೆಯ ಸಂಧಿ ಎಂದು ನಮಗೆ ಗೊತ್ತಿರಲಿಲ್ಲ' ಆ ಕರಡಿ ಗಾಭರಿಗೊಂಡು ನಮ್ಮನ್ನು ಮೂಸಲು ತೊಡಗಿತು.

'ನಮ್ಮ ಬಟ್ಟೆ ಬರೆಗಳನ್ನು ಎಳೆದಾಡಲು ತೊಡಗಿತು'

'ನಾವು ಬಂದೂಕು ಚಲಾಯಿಸುವ ಹಾಗಿಲ್ಲ'

'ಸುಮ್ಮನಿರುವ ಹಾಗೂ ಇಲ್ಲ'

'ನಾನು ಒಂದು ಕೆಲಸ ಮಾಡಿದೆ'

'ನಾವು ನೆಲದಲ್ಲಿ ಮಲಗಲು ಹಾಸಿದ್ದ ಮಿಲಿಟರಿ ಕಂಬಳಿಯನ್ನು ಎತ್ತಿಕೊಂಡು ಅದರ ಮುಖಕ್ಕೆ ಒಗೆದೆ'

'ಕಂಬಳಿ ಮುಖಕ್ಕೆ ಸುತ್ತಿಕೊಂಡರೆ ಕರಡಿ ಕಂಗಾಲಾಗುತ್ತದೆ. ಅದಕ್ಕೆ ಮುಖದಿಂದ ಕಂಬಳಿಯನ್ನು ಬಿಡಿಸಿ ತೆಗೆಯಬಹುದು ಎಂದೂ ಗೊತ್ತಿರುವುದಿಲ್ಲ. ಇದು ನಿಜಾಮಾಬಾದಿನ ಕರಡಿ ಹಿಡಿಯುವ ಖಲಂದರರು ನಮಗೆ ಹೇಳಿಕೊಟ್ಟ ವಿದ್ಯೆ'

'ಕಂಬಳಿ ಸುತ್ತಿಕೊಂಡ ಕರಡಿ ಕಂಗಾಲಾಗಿ ಮರಕ್ಕೆ ಡಿಕ್ಕಿ ಹೊಡೆದು ಪ್ರಪಾತದಲ್ಲಿ ಉರುಳಿಕೊಂಡು ಗಿಡಮರ ಪೊದೆಗಳ ನಡುವೆ ಕುರುಡನಂತೆ ಓಡಾಡಲು ಶುರುಮಾಡಿತು'

'ಅಷ್ಟು ಹೊತ್ತಿಗೆ ಸಣ್ಣಗೆ ಬೆಳಕಾಗುತ್ತಿತ್ತು. ದೂರದಿಂದ ಪೊಲೀಸು ಜೀಪು ಬರುವುದು ಕಾಣಿಸಿತು'

'ಮುಖಕ್ಕೆ ಕಂಬಳಿ ಸುತ್ತಿಕೊಂಡು ತಮ್ಮ ಕಡೆಗೆ ಬರುತ್ತಿರುವ ಕರಡಿಯನ್ನು ಆತ್ಮಾಹುತಿ ದಳದ ಕಾಮ್ರೇಡನೆಂದು ಅಂದುಕೊಂಡು ಪೊಲೀಸರು ಗುಂಡುಹಾರಿಸಿದರು'

'ಕರಡಿ ಸತ್ತು ಬಿದ್ದಿತು. ಪೊಲೀಸರು ಬಂದೂಕು ಹಿಡಿದುಕೊಂಡು ಯಾವುದೇ ದಾಳಿಯನ್ನು ಹಿಮ್ಮೆಟ್ಟಿಸಲು ಸಜ್ಜಾಗಿ ನಿಂತಿದ್ದರು'

'ಹಾಗಾಗಿ ಆವತ್ತು ಅವರು ಬಚಾವಾದರು'

ಕಾಮ್ರೇಡ್ ಆಲಿ ರೈಟರು ಈ ಕತೆಯನ್ನು ಹಲವು ಸಲ ಹೇಳಿದ್ದರು.

ಅದೇ ಕಥೆ ಆದರೆ ಬೇರೆ ಬೇರೆ ರಾಜ್ಯಗಳು, ಬೇರೆ ಬೇರೆ ಕಾಡುಗಳು ಮತ್ತು ಬೇರೆ ಬೇರೆ ಪೊಲೀಸರು. ಆದರೆ ಕರಡಿ ಮಾತ್ರ ಅದೇ. ಮುಖಕ್ಕೆ ಮಿಲಿಟರಿ ಕಂಬಳಿ ಹೊದಿಸಿಕೊಂಡ ಅಮಾಯಕ ಕರಡಿ.

ಆಲಿಯವರು ಒಂದೊಂದು ಸಲ ಹೇಳುವಾಗಲೂ ಒಂದೊಂದು ಸಂಗತಿಗೆ ಒತ್ತು ಕೊಡುತ್ತಿದ್ದರು.

ಒಂದು ಸಲ ಕರಡಿಯಿಂದ ಪಾರಾದ ತಮ್ಮ ಜಾಣ್ಮೆ.

ಇನ್ನೊಂದು ಸಲ ಕರಡಿಯಿಂದಾಗಿ ಪ್ರಾಣ ಉಳಿಸಿಕೊಂಡ ಪೊಲೀಸರ ಅದೃಷ್ಟ.

ಮತ್ತೊಂದು ಸಲ ಕಂಬಳಿಯಿಂದಾಗಿ ಪ್ರಾಣಕಳೆದುಕೊಂಡ ಕರಡಿಯ ಅಮಾಯಕತೆ.

ಆದರೆ, ಕೊನೆಯ ಸಲ ಈ ಕಥೆ ಹೇಳಿದಾಗ ಏನಕ್ಕೂ ಒತ್ತು ಕೊಡದೆ ಸುಮ್ಮನೆ ನಡೆದದ್ದನ್ನು ನಡೆದ ಹಾಗೆ ಹೇಳುವ ಹಳೆಯ ಕಾಲದ ವರದಿಗಾರನ ಹಾಗೆ ತಣ್ಣಗೆ ವಿವರಿಸಿದ್ದರು.

ಯಾಕೆಂದರೆ ಅವರು ಜೀವನದಲ್ಲಿ ಸೋತು ಹೋಗುತ್ತಿರುವುದನ್ನು ಆ ಕತ್ತಲೆಯಲ್ಲಿ ಸ್ಪಷ್ಟಗೊಳಿಸಿಕೊಳ್ಳುತ್ತಾ ನನ್ನ ಜೊತೆ ನಡೆಯುತ್ತಿದ್ದರು.

* * *

ಮಡಿಕೇರಿಯ ಆ ಪೆಟ್ರೋಲು ಬಂಕಿನ ಮುಂದೆ ತುಂಬ ಹೊತ್ತು ಕಾರು ನಿಲ್ಲಿಸಿಕೊಂಡು ಗಾಜು ಏರಿಸಿಕೊಂಡು ಹಾಗೇ ಸೀಟಿಗೆ ತಲೆಯಾನಿಸಿಕೊಂಡು ಕುಳಿತಿದ್ದೆ.

ಆ ಡಿಸೆಂಬರಿನ ಚಳಿಯಲ್ಲಿ ಇರುಚಲು ಮಳೆಯೂ ಶುರುವಾಗಿತ್ತು. ಎಲ್ಲೋ ಉಂಟಾಗಿರುವ ನಿರ್ವಾತ, ಇನ್ನೆಲ್ಲೋ ಎದ್ದಿರುವ ಚಂಡಮಾರುತ.

ಹೊತ್ತಿಕೊಳ್ಳುತ್ತಿದ್ದ ಬೀದಿದೀಪಗಳನ್ನು ಮುತ್ತುತ್ತಿರುವ ಮಳೆಯ ಹಾತೆಗಳು.

ಕೋಪಟ್ಟೆಯಲ್ಲಿ ಬಸ್ಸು ಇಳಿದು ಉತ್ತರ ದಿಕ್ಕಿನ ತೀಪಟ್ಟೆ ಮಲೆಯ ಏರುದಾರಿಯನ್ನು ಏರುತ್ತಿರುವ ಕಾಮ್ರೇಡ್ ಆಲಿ ರೈಟರು.

ಬಹುಶಃ ಅವರು ಮುಂದಿನ ಶುಕ್ರವಾರ ಶ್ರೀರಾಮ ಬಸ್ಸು ಹತ್ತಿ ಮಡಿಕೇರಿಗೆ ಬರಲಾರರು ಅನಿಸಿತು.

ಯಾಕೆಂದರೆ ಮಾತು ಕೊಟ್ಟ ಹಾಗೆ ನಾಳೆ ಶನಿವಾರ ನಾನೂ ಅವರ ಬಳಿಗೆ ಹೋಗಲಾರೆನು ಅನಿಸಿತು.

ಕಾರನ್ನು ಹಾಗೇ ರಸ್ತೆ ಬದಿಯ ಇಳಿಜಾರಿನೊಳಕ್ಕೆ ಇಳಿಸಿ ನಿಲ್ಲಿಸಿ ಕೊಡೆ ಹಿಡಿದು ಹೊರಗೆ ಇಳಿದು ಆ ಇರುಚಲು ಮಳೆಯಲ್ಲಿ ಎಲ್ಲಿಗೆ ಎಂದು ಗೊತ್ತಿಲ್ಲದೆ ನಡೆಯತೊಡಗಿದೆ. ●